ಕೇಂದ್ರೀಕರಣದಿಂದ ಆ ನೋಟದಲ್ಲಿ ಭಾಗಿಯಾಗಿತ್ತೆಂದರೆ, ಆ ಸಮೂಹದಲ್ಲಿ ಇದ್ದ ಯಾರೂ ಅಂಥ ಕೇಂದ್ರೀಕರಣ ಇಲ್ಲದೆ ಉಳಿಯುವುದು ಸಾಧ್ಯವಿಲ್ಲದ ಸಾಂಕ್ರಾಮಿಕತೆ ಅಲ್ಲಿ ಹರಡಿತ್ತು. ಭಕ್ತಿ, ಭಯ, ಧಾರ್ಮಿಕತೆ, ನಂಬಿಕೆ – ಮೊದಲಾಗಿ ಯಾವ ಶಬ್ದವೂ ಆ ಅವಸ್ಥೆಯನ್ನು ವರ್ಣಿಸಲಾರದು. ಅದೊಂದು ಬಗೆಯ ಅಪೇಕ್ಷೆ, ಅಷ್ಟೇ. ಪ್ರಾಯಶಃ, ಆ ಪ್ರೇಕ್ಷಕವರ್ಗವು ತಾನು ಏನನ್ನು ನೋಡಲು ಬಯಸುತ್ತಿತ್ತೋ ಅದನ್ನು ಅಲ್ಲಿ ಆವಾಹಿಸಿಕೊಳ್ಳುತ್ತಿತ್ತು. ನಿಜವಾಗಿ, ಮೈಮೇಲೆ ಬಂದಿರುವುದು ದೆಯ್ಯಗಳಿಗೋ ಅಥವಾ ನಮಗೋ ಎಂಬೊಂದು ಲಹರಿಯೂ ನನ್ನ ಮನಸ್ಸಿನೊಳಗೆ ಹಾದುಹೋಗುತ್ತಿತ್ತು – ನಮ್ಮ ಅಪೇಕ್ಷೆಯೇ ನಮ್ಮ ಕಣ್ಣುಗಳ ಕನ್ನಡಿಗೆ ಅಂಥ ಅಲೌಕಿಕ ರೂಪಗಳನ್ನು ತೋರಿಸುತ್ತಿರಬಹುದೆ?

ಈ ಆಟ ಸುಮಾರು ಎರಡು ಗಂಟೆಗೂ ಮೀರಿ ನಡೆದಿರಬೇಕು. ನಾವೆಲ್ಲ ಕಾಲದ ಪರಿವೆಯೇ ಇಲ್ಲದೆ ಅಲ್ಲಿ ಕೂತಿದ್ದೆವು. ನಾವು ಯಾರು, ಎಲ್ಲಿಂದ ಬಂದವರು, ಯಾಕೆ ಬಂದೆವು, ನಾಳೆ ಎಲ್ಲಿಗೆ ಹೋಗುವವರು – ಮೊದಲಾದ ಲೌಕಿಕ ಸಂಗತಿಗಳಿಂದ, ಆ ಎರಡು ಗಂಟೆ ನಾವು ಸಂಪೂರ್ಣ ಹೊರಗೆ ಬಂದಿದ್ದೆವು. ಪ್ರೇಕ್ಷಾಂಗಣದಲ್ಲಿ ಬಹುಸಂಖ್ಯಾತರಾಗಿದ್ದ ಆ ಊರಿನ ಕೆಳಜಾತಿಯ ಜನರೂ, ಅದಕ್ಕೆ ಸಂಬಂಧವೇ ಇಲ್ಲದ ಪರ ಊರಿನ ನಾವೂ ನಮ್ಮೆಲ್ಲ ಭಿನ್ನತೆಗಳನ್ನು ಮರೆತು ಆ ನೋಟದಲ್ಲಿ ಕರಗಿಕೊಂಡಿದ್ದೆವು. ಸಾಧಾರಣೀಕರಣ ಎಂದು ನಾಟ್ಯಶಾಸ್ತ್ರದ ವ್ಯಾಖ್ಯಾನಕಾರರು ಹೇಳಿರುವುದು ಇದೇ ಇರಬಹುದಲ್ಲವೆ? ಎಲ್ಲ ರಂಗಭೂಮಿಗಳೂ ಮಾಡಲು ಬಯಸುವುದು, ಆದರೆ ಇಷ್ಟು ಸಮರ್ಥವಾಗಿ ಮಾಡಲು ಸಾಧ್ಯವಿಲ್ಲದೆ ಸೊರಗುತ್ತಿರುವುದು ಇದೇ ಕೆಲಸವನ್ನೇ ಅಲ್ಲವೆ? ರಂಗಭೂಮಿಯೆನ್ನುವುದು ಬದುಕಿನ ಕನ್ನಡಿ ಎಂಬ ಸವಕಳಿ ವ್ಯಾಖ್ಯೆಯೇನೋ ನಿಜವೇ ಇರಬಹುದು. ಆದರೆ, ಅದು ಎಂಥ ಕನ್ನಡಿಯಾಗಿರಬೇಕು? ಕೇರಳದಲ್ಲಿ ನಾವು ನೋಡಿದ ಒಂದೊಂದು ರಂಗಪ್ರಕಾರವೂ ಅಂಥ ಒಂದೊಂದು ಬಗೆಯ ಮಾಯಾದರ್ಪಣವೇ ಅಲ್ಲವೆ? ಹಾಗಿದ್ದರೆ, ನಾವು ಮುಂದೆ ಹುಡುಕಬೇಕಿರುವ ಆಧುನಿಕ ರಂಗಭೂಮಿಯ ಕನ್ನಡಿ ಹೇಗಿರಬೇಕು? – ಹೀಗೆ ನನ್ನ ಮನಸ್ಸು ನಾನಾ ದಿಕ್ಕುಗಳಲ್ಲಿ ಸಂಚರಿಸುತ್ತಿತ್ತು.

ಕಟ್ಟಕಡೆಗೆ, ಆ ದೆಯ್ಯ ಓಡಿ ಗುಡಿಯ ಬಾಗಿಲ ಬಳಿ ಹೋಗಿ ಕುಸಿದು ಕೂತುಕೊಂಡಿತು. ಆಗ, ಜನರು ಒಬ್ಬೊಬ್ಬರಾಗಿ ಹೋಗಿ ತಮ್ಮ ಅಹವಾಲುಗಳನ್ನು ಅದರ ಎದರು ಹೇಳಿಕೊಳ್ಳುತ್ತ

